

# ಕೇಯು ಮಂದಾರ

■ ಚಿತ್ರ– ಲೇಖನ:
**ಮಂಜುನಾಥ. ಡಿ.ಎಸ್.**

ಇದು ಕೇಯು ಮಂದಾರ. ವೈಜ್ಞಾನಿಕವಾಗಿ ಬೌಹಿನಿಯ ಟೊಮೆಂಟೋಸಾ ಎಂದು ಕರೆಯಲ್ಪಡುವ ಇದು ಫಬಾಸಿಯೇ ಜಾತಿಗೆ ಸೇರಿದ ಸಸ್ಯ. 16ನೆಯ ಶತಮಾನದ ಸ್ವಿಸ್ ಸಸ್ಯಶಾಸ್ತ್ರ ತಜ್ಞರಾದ ಬೌಹಿನ್ ಸಹೋದರರ ಸ್ಮರಣಾರ್ಥ ಸಸ್ಯಕ್ಕೆ ಈ ಹೆಸರು ಇಡಲಾಗಿದೆ. ಇದಕ್ಕೆ ಕಂಚವಾಲ, ಪೀತ ಕಾಂಚನ, ದೇವ ಕಾಂಚನಂ, ಕಂಚನಾರ್, ಕಂಚನ, ಸಿಗಪ್ಪು ಮಂದಾರೈ, ಮೌಂಟನ್ ಎಬೊನಿ, ಹೀಗೆ ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳಿವೆ.

ಸುಮಾರು ಹತ್ತು ಅಡಿ ಎತ್ತರದವರೆಗೆ ಬೆಳೆದು ವಿಶಾಲವಾಗಿ ಹರಡುವ ಗಿಡ ಅನೇಕ ಬಾಗಿದ ಕೊಂಬೆಗಳಿಂದ ಕೂಡಿದ್ದು ಸುಮಾರು ಎರಡು ವರ್ಷಗಳ ನಂತರ ಹೂಗಳನ್ನು ಬಿಡಲಾರಂಬಿಸುತ್ತದೆ. ಘಂಟೆಯಾಕಾರದ ಪಂಚದಳಗಳ ಈ ಪುಷ್ಪ ತಿಳಿ ಹಳದಿ ಬಣ್ಣಹೊಂದಿದ್ದು, ಸಾಮಾನ್ಯವಾಗಿ ಒಂದು ದಳದ ಕೆಳ ಭಾಗದಲ್ಲಿ ಕಡು ಕೆಂಗಂದು ಬಣ್ಣದ ಹಚ್ಚೆಯಂತಹ ಚಿತ್ತಾರವಿರುತ್ತದೆ. ಬೆಳಗಿನಲ್ಲಿ ಅಗಲವಾಗಿ ಅರಳಿರುವ ಸುಂದರ ಸುಮಗಳು ಸಂಜೆಯಾಗುತ್ತಿದ್ದಂತೆ ಮುದುಡಿ ಇಳೆಯತ್ತ ಮುಖ ಮಾಡುತ್ತವೆ.

ಉಷ್ಣ ಹಾಗು ಸಮಶೀತೋಷ್ಣ ವಲಯಗಳಲ್ಲಿ ಬೆಳೆಯುವ ಈ ಸಸ್ಯವು ಭಾರತದ ದಕ್ಷಿಣ ರಾಜ್ಯಗಳು, ಅಸ್ಸಾಂ, ಮತ್ತು ಬಿಹಾರಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಈ ಸಸ್ಯದ ಬೇರು, ಕಾಂಡ, ಎಲೆ, ಮೊಗ್ಗು, ಹೂವು ಎಲ್ಲದರಲ್ಲೂ ರೋಗನಿವಾರಕ ಗುಣಗಳಿವೆ. ಹಾಗಾಗಿ ಕೆಮ್ಮು, ಮಲೇರಿಯ, ಆಮಶಂಕೆ, ಜಾಂಡೀಸ್, ರಕ್ತಸ್ರಾವ, ಚರ್ಮರೋಗ, ಇತ್ಯಾದಿಗಳ ನಿವಾರಣೆಗೆ ಆಯುರ್ವೇದ ಔಷಧಗಳಲ್ಲಿ ಇವುಗಳನ್ನು ಬಳಸಲಾಗುತ್ತದೆ.

